grown to the malikdars. Sir, their purpose to help the farmers has been sorted out. We have not consulted the Law Department before issuing the order. Now we will consult the law department and whatever opinion they give we will implement it. What more a Minister can say ? Bangarappa should know that his purpose has been fulfilled.

MR. SPEAKER.—The matter is closed. ಈಗ ಶ್ರೀಯುತರುಗಳಾದ ಡಿ. ಎ. ಚಿನ್ನಪ್ಪ, ಬಿ. ಎಸ್. ಯಡಿಯೂರಪ್ಪ ಹಾಗೂ ಕೆ. ಹೆಚ್. ಪಾಟೀಲ್ ಅವರುಗಳ ಹೆಸರಿನಲ್ಲಿರುವ ಗಮನ ಸೆಳೆಯುವ ಸೂಚನೆಯನ್ನು ವಿದ್ಯಾಮಂತ್ರಿಗಳು ಸಭೆಗೆ ಬಂದ ಮೇಲೆ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ಜಿ. ಎಸ್. ಆಚಾರ್ ಅವರು ತಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಮಂತ್ರಿಗಳ ಗಮನಪನ್ನು ಸೆಳೆಯಬಹುದು.

೬) ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ನಿಷ್ಕ್ರಿಯತೆ ಮತ್ತು ಅವ್ಯವಹಾರದ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ನಾನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ನಿಷ್ಕ್ರಿಯತೆ ಮತ್ತು ಅವ್ಯವಹಾರದ ಬಗ್ಗೆ ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಕೃಷಿಕ ಸಮಾಜದ ಕಾರ್ಯಾಧ್ಯಕ್ಷರಾಗಿ ಹಾಲಿ ಕೆಲಸ ಮಾಡುತ್ತಿರುವ ಶ್ರೀ ಸಿ. ನರಸಿಂಹಪ್ಪ ಇವರ ನೇಮಕಾತಿ ಹಾಗೂ ಕೃಷಿಕ ಸಮಾಜದ ಉಪಯೋಗಕ್ಕಾಗಿ ಒಂದು ಕಾರನ್ನು ಖರೀದಿಸಿದ ಬಗ್ಗೆ ಮತ್ತು ಸದರಿ ಸಮಾಜದ ಕಟ್ಟಡದಲ್ಲಿ ವಿವಿಧ ಇಲಾಖೆಗಳಿಗೆ ಕೊಟ್ಟಿರುವ ಕಛೇರಿಗಳ ಬಾಡಿಗೆ ವಸೂಲಾತಿ ಬಗ್ಗೆ ಮತ್ತು ಇನ್ನಿತರ ಕೆಲವು ಆಪಾದನೆಗಳು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕರ್ನಾಟಕ ಪ್ರದೇಶ ಕೃಷಿಕ ಸಮಾಜವು ಮೈಸೂರು ಸೊಸೈಟಿಗಳ ರಿಜಿಸ್ಟ್ರರ ಶಿನೇ ಆಕ್ಟ್ ಪ್ರಕಾರ ನೋಂದಣಿಗೆ ಸ್ಥಾಪಿಸಲಾಗಿರುತ್ತದೆ. ಪ್ರಯುಕ್ತ ಸದರಿ ಸಮಾಜದ ಅವ್ಯವಹಾರಗಳು ಮತ್ತು ಹಾಲಿ ಕೆಲಸ ಮಾಡುತ್ತಿರುವ ಕಾರ್ಯಾಧ್ಯಕ್ಷರು ನೇಮಕಾತಿ ಬಗ್ಗೆ ವಿಷಯಗಳ ಬಗ್ಗೆ ಪರಿಶೀಲಿಸಿ ಒಂದು ವರದಿಯನ್ನು ಕೊಡುವಂತೆ, ಕರ್ನಾಟಕ ರಿಜಿಸ್ಟ್ರರ್ ಆಫ್ ಸೊಸೈಟಿ ಇವರನ್ನು ಈಗಾಗಲೇ ಕೋರಿಕೊಳ್ಳಲಾಗಿದೆ. ಆದರಿಂದ ಉತ್ತರವನ್ನು ನೀರಿಕ್ಷಿಸಲಾಗುತ್ತಿದೆ. ವರದಿ ಬಂದ ನಂತರ ಸರ್ಕಾರವು ಆದನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವುದು.

† ಶ್ರೀ ಜಿ. ಎಸ್. ಆಚಾರ್,—ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡತಕ್ಕ ಒಂದು ಸಂಸ್ಥೆ. ರೈತರ ಸಮಸ್ಯೆಗಳನ್ನು ತಿಳಿದುಕೊಂಡು ಕೃಷಿ ಅಭಿವೃದ್ಧಿ ಬಗ್ಗೆ ವಿಶೇಷವಾಗಿ ಸಾದನೆ ಮಾಡಬೇಕಾದ ಸರ್ಕಾರದಿಂದ ಪ್ರೇರಸ್ಕೃತವಾದ ಒಂದು ಸಂಸ್ಥೆ. ಕರ್ನಾಟಕದ ಕೃಷಿಕ ಸಚಿವರು ಇದರ ಗೌರವ ಅಧ್ಯಕ್ಷರಾಗಿದ್ದಾರೆ. ಇದಕ್ಕೆ ಒಬ್ಬರು ಕಾರ್ಯಾಧ್ಯಕ್ಷರೂ ಇರುತ್ತಾರೆ. ಸರ್ಕಾರದಿಂದ ನೇಮಕ ಮಾಡಲ್ಪಟ್ಟ ಪ್ರತಿನಿಧಿಗಳೂ ಇದ್ದಾರೆ. ಭಾರತ ಕೃಷಿಕ ಸಮಾಜದಿಂದ ನೇಮಕ ಮಾಡಲ್ಪಟ್ಟ ಸದಸ್ಯರೂ ಇದ್ದಾರೆ. ಪ್ರತಿ ಜಿಲ್ಲೆಯಿಂದ ಆಯ್ಕೆಗೊಂಡ ಸದಸ್ಯರೂ ಇದ್ದಾರೆ. ಭಾರತ ಕೃಷಿಕ ಸಮಾಜದ ಅಧ್ಯಕ್ಷರಾಗಿ ಲೋಕಸಭೆಯ ಅಧ್ಯಕ್ಷರಾದ ಶ್ರೀ ಬಲರಾಮ ಜಾಖಿಡ್ ಅವರು ಇದ್ದಾರೆ. ಇದು ರಾಜ್ಯ ಸರ್ಕಾರದ ಕೃಷಿಕ ಸರ್ಕಾರಕ್ಕೆ ಆಫಿಲಿಯೇಟ್ ಆಗಿದೆ ಹೀಗೆ ಇದ್ದರೂ ಕೂಡ ರಾಜ್ಯ ಕೃಷಿಕ ಸಮಾಜದ ನಿಬಂಧನೆ ಪ್ರಕಾರ ಬೇರೆ ಬೇರೆ ಜಿಲ್ಲೆಗಳಿಂದ ಆಯ್ಕೆಗೊಂಡ ಸದಸ್ಯರು, ಕಾರ್ಯಾಧ್ಯಕ್ಷರು ಆಗಿರಬೇಕು ಎಂದು ನಿಯಮ ಇದ್ದರೂ ಕೂಡ ಇಲ್ಲಿ ನಾಮಕರಣ ಮಾಡಲ್ಪಟ್ಟ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಇದು ಪ್ರಥಮತಃ ರಾಜಿ ಸರ್ಕಾರದ ಒಂದು ತಪ್ಪು. ಇದರಲ್ಲಿ ಆ ಮೇಲೆ ಹೈ

ಕೋರ್ಟಿನ ಮುಂದೆ ರಿಟ್ ಪಿಟಿಷಿನ್ ಹೋದಾಗ ಹೈ ಕೋರ್ಟಿನ ಒಂದು ಆದೇಶ ದಿನಾಂಕ ೧೨-೧೧-೮೬ ರಲ್ಲಿ ಬಂದಿದೆ, ಇದು ಸಮಂಜಸ ಅಲ್ಲವೆಂದು. ಭಾರತ ಕೃಷಿಕ ಸಮಾಜಕ್ಕೆ ಇದರ ವಿರುದ್ಧ ಮನವಿ ಗಳು ಹೋದಾಗ ಅಲ್ಲಿಂದ ಸಹ ೪-೧೨-೮೬ರಲ್ಲಿ ಇವರು ಅಧ್ಯಕ್ಷರಾಗಿ ಇರುವುದು ಸಮರ್ಪಕ ಅಲ್ಲ ಎಂದು ಬಂದಿದೆ. ಆದರೂ ಕೂಡ ಸರ್ಕಾರದಿಂದ ನಾಮಕರಣಗೊಂಡವರು ಅಧ್ಯಕ್ಷರಾಗಿ ಮುಂದು ವರಿಯುತ್ತಿದ್ದಾರೆ. ಇಲ್ಲಿ ಏನು ಆಗಿದೆ ಎಂದು ಹೇಳಿದ್ದೇನೆ. ಅದಕ್ಕಿಂತ ಹೆಚ್ಚು ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆ ಸರ್ಕಾರವೇ ಹೇಳುತ್ತಿದೆ, ಕಾರ್ ಅನ್ನು ಖರೀದಿಸಿದ ಬಗ್ಗೆ ವಿವಿಧ ಆರೋಪಗಳ ಕಛೇರಿ ಬಾಡಿಗೆ ವಸೂಲಾತಿ ಬಗ್ಗೆ ಇನ್ನೂ ಕೆಲವು ಅಪಾದನೆಗಳು ಬಂದಿದೆ. ಆದರೆ ಇದು ನಾನು ಮಾಡಿದ ಆಪಾದನೆಗಳು ಅಲ್ಲ. ಸರ್ಕಾರದ ಗಮನಕ್ಕೆ ಆಪಾದನೆಗಳು ಬಂದಿದೆ. ಎಂದು ತಿಳಿದು ಕೊಂಡ ಹಾಗೆ ಆಯಿತು. ಇದರ ವಾರ್ಷಿಕ ವರದಿ ಬರುವಲ್ಲಿ ಬಹಳ ವಿಳಂಬ ಆಗುತ್ತಿದೆ. ಇವೊತ್ತು ಏನು ಆಗಿದೆ ಅಂದರೆ ಕೃಷಿಕ ಸಮಾಜದಲ್ಲಿ ನಿಯಮಾವಳಿ ಪ್ರಕಾರ ಕಾಲಕಾಲಕ್ಕೆ ಮಹಾ ಸಭೆ ನಡೆದಿಲ್ಲ. ಲೆಕ್ಕ ಪತ್ರಗಳು ಆಡಿಟ್ ಆಗಿಲ್ಲ. ಆಯವ್ಯಯ ಮಂಜೂರು ಆಗಿಲ್ಲ. ಎಲ್ಲಾ ಉಪ ಸಮಿತಿಗಳ ಮಟ್ಟ ದಲ್ಲಿ ಆಗಿರಬಹುದೇ ಹೊರತು ಕಾರ್ಯಕಾರಿ ಮಂಡಳಿಯಲ್ಲಿ ಹಾಗೂ ಮಹಾ ಸಭೆಯಲ್ಲಿ ಕ್ರಮ ಪ್ರಕಾರ ವಾಗಿ ಆಗಬೇಕಾದಂತಹ ಕೆಲಸಗಳು ಆಗಿಲ್ಲ. ಅಲ್ಲಿ ಕಟ್ಟಿರುವ ಕಟ್ಟಡದ ಒಂದೇ ಒಂದು ಭಾಗವನ್ನು ಕೆನರಾ ಬ್ಯಾಂಕಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಇನ್ನೂ ಒಂದು ಭಾಗವನ್ನು ಜಿಲ್ಲಾಧಿಕಾರಿಗಳ ಕಛೇರಿಗೆಂದು ಬಾಡಿಗೆಗೆ ಕೊಟ್ಟಿದ್ದಾರೆ. ಕೃಷಿಕರ ಸಮಗ್ರವಾದ ಅಭಿವೃದ್ಧಿಗಾಗಿ ಹಿಂದೆ ಯಾರು ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ ಎಂದು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಮಾನ್ಯ ಕೆ.ಹೆಚ್. ಪಾಟೀಲ್ ರವರು ಕೃಷಿ ಸಚಿವರು ಆಗಿದ್ದಾಗ ಕೃಷಿಕರ ಸಮಾಜವನ್ನು ಕಟ್ಟಿ ಬೆಳೆಸುವುದಕ್ಕೋಸ್ಕರ ಸಮಗ್ರವಾದ ಒಂದು ಕೃಷಿಕರ ಒಂದು ಅಂಗ ಸಂಸ್ಥೆಯನ್ನು ಮಾಡಲಿಕ್ಕೆ ಕರ್ನಾಟಕದಾದ್ಯಂತ ಸದಸ್ಯತನವನ್ನು ಕೊಟ್ಟಿದ್ದರು. ಆ ಮೇಲೆ ಕೆ.ಹೆಚ್. ರಂಗನಾಥ್‌ಅವರು ಕೃಷಿ ಸಚಿವರು ಆಗಿದಾಗ ಇದರ ಕುರಿತು ಸಮಗ್ರವಾದ ಕೆಲಸ ಮಾಡಲು ಸಕ್ರಿಯವಾಗಿ ಕೆಲಸ ಮಾಡಲು ಶ್ರೀಮತಿ ಬಸವರಾಜೇಶ್ವರಿ ಅವರ ಕಾರ್ಯಾಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ ತಾವೂ ಕೂಡ ಈ ಸಮಿತಿಗೆ ಉಪಾಧ್ಯಕ್ಷರು ಆಗಿದ್ದೀರಿ.

ಅಧ್ಯಕ್ಷರು.—ಹಿಂದೆ ಆಗಿದ್ದೆ, ಈಗ ನಾನು ಯಾವುದರಲ್ಲೂ ಇಲ್ಲ.

ಶ್ರೀ ಜಿ. ಎಸ್. ಆಚಾರ್.—ಹಿಂದೆ ಒಳ್ಳೆಯ ಕೆಲಸ ಮಾಡಿದಂತಹ ಹಿನ್ನೆಲೆ ಈ ಸಂಘಕ್ಕೆ ಇದೆ.

ಅಧ್ಯಕ್ಷರು.—ನಾವು ಕಟ್ಟಿಟ ಬುತ್ತಿಯನ್ನು ಯಾರೋ ತಿನ್ನುವುದಕ್ಕೆ ಹತ್ತಿದ್ದಾರೆ. ಅದನ್ನು ಬಂದ್ ಮಾಡಿ.

ಶ್ರೀ ಜಿ.ಎಸ್. ಆಚಾರ್.—ಈಗ ತಿಂಗಳಿಗೆ ಸುಮಾರು ಒಂದೂ ಕಾಲು ಕೋಟಿ ರೂಪಾಯಿ ಕಟ್ಟಡ ಬಾಡಿಗೆ ಬರುತ್ತದೆ. ಆ ಬಾಡಿಗೆ ಹಣದಿಂದ ಏನು ಉಪಯೋಗ ಆಗಿದೆ, ಅದು ಇಲ್ಲಿನ ವ್ಯವಸ್ಥೆಗಳನ್ನು ನೋಡಿಕೊಂಡು ಹೋಗಲಿಕ್ಕೆ ವ್ಯಯ ಆಗುತ್ತಿದೆಯೇ ಹೊರತು ಅಭಿವೃದ್ಧಿ ವ್ಯವಸ್ಥೆ ಆಗಿಲ್ಲ. ನಾನು ಸಮಗ್ರವಾದ ಅಭಿವೃದ್ಧಿ ಬಗ್ಗೆ ಪ್ರಶ್ನೆ ಕೇಳಿದೆ. ಕೃಷಿಕರ ಅಭಿವೃದ್ಧಿ ಬಗ್ಗೆ ಒಂದು ಕೃಷಿಕರ ವರ್ಗ ಸಮಗ್ರವಾಗಿ ಕೆಲಸ ಮಾಡಬೇಕಾದರೆ ಯಾವುದೇ ಒಂದು ವರ್ಗ ದುರದೃಷ್ಟವಶಾತ್ ಕರ್ನಾಟಕದಲ್ಲಿ ರೈತರ ಚಳುವಳಿ ಬಂದಾಗ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು, ಕೃಷಿಕರಿಗೆ ಕೆಲಸ ಮಾಡುವಂತಹ ಅನೇಕ ರೈತ ಸಂಘಗಳು, ನಾಯಕರೂ ಬಂದರು. ಯಾವುದೇ ಒಂದು ವರ್ಗದ ಸಮಾಜ ಆಗುವ ಬದಲಾಗಿ ಸಮಗ್ರವಾಗಿ ಕೃಷಿಕರ ಅಭಿವೃದ್ಧಿಯನ್ನು ಸಾಧಿಸತಕ್ಕ ಸಂಸ್ಥೆ ಇದಾಗ ಬೇಕಾಗಿತ್ತು. ಇದರ ಬಗ್ಗೆ ಸರ್ಕಾರ ಆಸಕ್ತಿ ವಹಿಸಿಲ್ಲ. ಕೃಷಿ ಮಂತ್ರಿಗಳೂ ಸಹ ಆಸಕ್ತಿ ವಹಿಸಿಲ್ಲ ಈ ದೃಷ್ಟಿಯಿಂದ ಒಳ್ಳೆಯ ರೀತಿಯಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಿ ಇದರಲ್ಲಿ ಏನು ಲೋಪದೋಷ ಗಳಿವೆ, ಭಾರತ ಕೃಷಿ ಸಮಾಜ ಹೇಗಿರತಕ್ಕದ್ದು ಹಾಗೂ ಹೈ ಕೋರ್ಟ್ ಹೇಗಿರತಕ್ಕ ಲೋಪದೋಷ ಗಳನ್ನು ಸರಿಪಡಿಸಬೇಕು ಹಾಗೂ ಚುನಾಯಿತ ಕಾರ್ಯಾಧ್ಯಕ್ಷರನ್ನು ನೇಮಕ ಮಾಡಿ ಯಾವ ಉದ್ದೇಶಕ್ಕಾಗಿ ಕೃಷಿಕರ ಸಮಾಜ ಸ್ಥಾಪನೆ ಆಯಿತು, ಆದರ ಬಗ್ಗೆ ಕೆಲಸ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರವನ್ನು ನಾನು ನೋಡಿದ್ದೇನೆ. ಇಲ್ಲಿರುವ ಮುಖ್ಯವಾದ ಅಂಶವೆಂದರೆ, ಸರ್ಕಾರದಿಂದ ನಾಮಕರಣ ಮಾಡಿದಂಥ ಸದಸ್ಯರನ್ನು ವಿತ್‌ಡ್ರಾ ಮಾಡಲಂ ಏತಕ್ಕೆ ತಡವಾಗುತ್ತಿದೆ ಎಂಬುದು. ನೀವೇ ಮಾಡಿದಂಥ ನಾಮಕರಣವನ್ನು ವಾಪಸ್ ಪಡೆಯುವುದಕ್ಕೆ ನಿಮಗೆ ಅಧಿಕಾರ ಇಲ್ಲವೇ ! ನಿಮಗಿರುವ ಅಧಿಕಾರವನ್ನು ಉಪಯೋಗ ಮಾಡಿ ಕೂಡಲೇ ಅವರನ್ನು ಏತಕ್ಕೆ ಬದಲಾವಣೆ ಮಾಡುವುದಿಲ್ಲ. ಈ ಕರ್ನಾಟಕ ಪ್ರದೇಶ ಕೃಷಿಕ ಸಮಾಜವು ಮೈಸೂರು ಸೊಸೈಟಿಗಳ ರಿಜಿಸ್ಟ್ರಾರ ಜನೇ ಆಕ್ಟ್ ವೇರೆಗೆ ಸ್ಥಾಪಿಸಲಾಗುತ್ತದೆ. ಆದ್ದರಿಂದ ಈ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ವರದಿ ಕೊಡಲು ರಿಜಿಸ್ಟ್ರಾರ್ ಆಫ್ ಸೊಸೈಟಿ ಇವರನ್ನು ಕೇಳಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಆದರೆ ಇವರು ನಾಮಕರಣ ಹೊಂದಿದ ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ಅವರನ್ನು ಬದಲಾವಣೆ ಮಾಡಲು ನೀವು ಹಿ ದೇಟು ಹಾಕಲಂ ಕಾರಣವೇನು ? ಈ ನಾಮಕರಣ ಹೊಂದಿದ ಅಧ್ಯಕ್ಷರು ಯಾವುದೇ ಆಕ್ಟಿವಿಟೀಸ್‌ನ್ನು ನಡೆಸಲು ಬರುವುದಿಲ್ಲವೆಂದು ಭಾರತ್ ಕೃಷಿಕ ಸಮಾಜದವರು ಒಂದು ನಿರ್ಣಯವನ್ನು ಕೂಡ ಪಾಸ್ ಮಾಡಿದ್ದಾರೆ. ಈ ಕಾರಣದಿಂದ ಈಗ ನರಸಿಂಹಪ್ಪನವರನ್ನು ನಾಮಕರಣ ಮಾಡಿದಂಥ ಆದೇಶ ಏನಿದೆ. ಅದನ್ನು ಹಿಂದಕ್ಕೆ ಪಡೆಯಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಕೃಷಿಕ ಸಮಾಜ ರೈತರ ಅಭಿವೃದ್ಧಿಗಾಗಿ ನಿರ್ಮಾಣಗೊಂಡಿರತಕ್ಕಂಥ ಒಂದು ಸಂಸ್ಥೆ ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಕಾರ್ಯಾಧ್ಯಕ್ಷರನ್ನು ಅಲ್ಲಿನ ಎಕ್ಸಿಕ್ಯುಟಿವ್ ಕಮಿಟಿಯವರು ನೇಮಕ ಮಾಡಿಕೊಳ್ಳುತ್ತಾರೆ. ಈಗ ಅಲ್ಲಿ ಶ್ರೀ ನರಸಿಂಹಪ್ಪನವರು ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇವರ ಮೇಲೆ ಅನೇಕ ಆರೋಪಗಳು ಬಂದಿವೆ. ಬಾಡಿಗೆ ವಿಚಾರದಲ್ಲಿ, ಕಾರನ್ನು ಖರೀದಿ ಮಾಡಿದ ವಿಚಾರದಲ್ಲಿ ಆರೋಪಗಳು ಬಂದಿವೆ. ಈ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕೆಂದು ಸರ್ಕಾರ ಈಗಾಗಲೇ ವಿಚಾರ ಮಾಡಿದೆ. ಈ ಕರ್ನಾಟಕ ಕೃಷಿಕ ಸಮಾಜವು ಮೈಸೂರು ಸೊಸೈಟಿಗಳ ರಿಜಿಸ್ಟ್ರಾರ ಜನೇ ಆಕ್ಟ್ ವೇರೆಗೆ ಸ್ಥಾಪಿಸಲಾಗಿರುತ್ತದೆ. ಆದ್ದರಿಂದ ಈ ಬಗ್ಗೆ ವಿಚಾರಣೆ ಮಾಡಿ ವರದಿ ಕೊಡುವಂತೆ ರಿಜಿಸ್ಟ್ರಾರ್ ಅವರಿಗೆ ತಿಳಿಸಲಾಗಿದೆ. ಆದರಿಂದ ವರದಿ ಬಂದಮೇಲೆ, ಅವರ ಮೇಲೆ ಮಾಡಿರುವ ಆರೋಪಗಳು ಸಾಬೀತಾದರೆ ಅವರ ಮೇಲೆ ಕಠಿಣ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಮಲ್ಲಾರಿಗೌಡ ಪಾಟೀಲ್ ಅವರು ಸರ್ಕಾರದಿಂದ ನಾಮಕರಣ ಹೊಂದಿದಂಥ ಸದಸ್ಯರನ್ನು ಏತಕ್ಕೆ ವಾಪಸ್ ಕರೆಸಿಕೊಳ್ಳಬಾರದು ಎಂದು ಕೇಳಿದ್ದಾರೆ, ಇವರ ಮೇಲಿನ ಆರೋಪಗಳು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ತನಿಖೆ ನಡೆಸಲು ಈಗಾಗಲೇ ಸರ್ಕಾರ ಕಾರ್ಯೋನ್ಮುಖವಾಗಿದೆ. ಈ ಬಗ್ಗೆ ಆದಷ್ಟು ಬೇಗ ವರದಿಯನ್ನು ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಇವರು ಅಧ್ಯಕ್ಷರಾಗಿ ಏನೇನು ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ, ಅವರು ಕೊಡುವಂತಹ ವರದಿಯ ಆಧಾರದ ಮೇಲೆ ಕ್ರಮ ಕೈಕೊಳ್ಳುತ್ತೇವೆಂದೂ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ —ಅವರು ತಪ್ಪು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ವರದಿ ಬರುವವರೆಗೆ ಏತಕ್ಕೆ ಕಾಯಬೇಕು ? ಕೂಡಲೇ ಅವರನ್ನು ಏತಕ್ಕೆ ವಿತ್‌ಡ್ರಾ ಮಾಡಬಾರದು ? ಈ ಬಗ್ಗೆ ತಡ ಮಾಡಲು ಕಾರಣವೇನು? ಇದರಲ್ಲಿ ಏನಾದರೂ ರಾಜಕೀಯ ಕಾರಣ ಇದೆಯೇ ? ಬೇರೆ ಏನಾದರೂ ಒತ್ತಡಗಳು ಇದೆಯೇ ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇವರನ್ನು ವಾಪಸ್ ಕರೆಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ ಎಂಬ ಬಗ್ಗೆ ತಕರಾರು ಇಲ್ಲ. ಈ ಬಗ್ಗೆ ಯಾವುದೋ ಒತ್ತಡ ಸರ್ಕಾರದ ಮೇಲಿದೆ ಎಂದು ಹೇಳುವುದು ಸರಿಯಾದುದಲ್ಲ. ಯಾವುದೇ ರೀತಿಯ ಒತ್ತಡಕ್ಕೂ ಸರ್ಕಾರ ಪಣಿಯುವುದಿಲ್ಲ ಅವರನ್ನು ರಕ್ಷಣೆ ಮಾಡಲು ಸರ್ಕಾರ ಹೋಗುವುದಿಲ್ಲ. ಇಲ್ಲಿ ನರಸಿಂಹಪ್ಪನವರು ತಪ್ಪು ಮಾಡಿದ್ದರೆ ಅದು ತಪ್ಪೆ. ಈ ಬಗ್ಗೆ ಶಿಕ್ಷೆ ವಿಧಿಸಲು ಸರ್ಕಾರ ಹಿಂದೆ ಬೀಳುವುದಿಲ್ಲ. ಈ ಬಗ್ಗೆ ವರದಿ ಬಂದಮೇಲೆ ಅವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ ಅವರ ಮೇಲೆ ಕಠಿಣ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಒಂದೂ ವಿಚಾರ, ನಾನು ಆಗಲೇ ಮಾತನಾಡುವಾಗ ಒಂದೂಕಾಲು ಕೋಟಿ ಬಾಡಿಗೆ ಬರುತ್ತದೆ ಎಂದು ಹೇಳಿದ್ದೆ, ಅದು ಒಂದೂ ಕಾಲು ಕೋಟಿಯಲ್ಲ, ಒಂದೂಕಾಲು ಲಕ್ಷ ಅವೇಲೆ ಇದರಲ್ಲಿ ಹಿಂದಕ್ಕೆ ತೆಗೆದುಕೊಳ್ಳುವಂಥ ವಿಚಾರದಲ್ಲಿ ನನಗೆ ತಿಳಿದುಬಂದ ಹಾಗೆ ಮೂಲತಃ ಅವರು ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾದರೂ ಹೈಕೋರ್ಟಿನಲ್ಲಿ ಆಕ್ಷೇಪ ಬಂದಾಗ ಆ ನಾಮಕರಣ ಸದಸ್ಯರ ಸದಸ್ಯತ್ವದ ಲೋಪವನ್ನು ನಿವಾರಿಸಿ ಕೊಳ್ಳಲಿಕ್ಕಾಗಿ ಅವರು ಇನ್ನೊಬ್ಬರಿಂದ ರಾಜೀನಾಮೆ ಕೊಡಿಸಿ ಅಲ್ಲಿಂದ ಎಲೆಕ್ಟೆಡ್ ಸದಸ್ಯರು ಕೊ-ಆಪ್ಟ್ ಮಾಡಿಕೊಂಡಿದ್ದಾರೆ. ಇದು ಮತ್ತೊಂದು ಅಕ್ರಮ ಅಕ್ರಮದ ಮೇಲೆ ನಡೆಯುವಂಥ ಮತ್ತೊಂದು ಅಕ್ರಮ ಕೂಡ ನಡೆದಿದೆ. ಇದನ್ನೂ ಪರಿಶೀಲನೆ ಮಾಡಿಸಿ.

ಶ್ರೀ ಸಿದ್ಧರಾಮಯ್ಯ.—ಮಾಡಿಸುತ್ತೇನೆ.

ಶ್ರೀ ವಟ್ಟಾರಿಗೌಡ ಎಸ್. ಪಾಟೀಲ್.—ಈಗ ಏನಾಗಿದೆಯೆಂದರೆ, ಮಾನ್ಯ ಮಂತ್ರಿಗಳಿಗೆ ಎಲ್ಲಾ ಗೊತ್ತಿದೆ, ಗೊತ್ತಿದ್ದರೂ ಅವರನ್ನು ತೆಗೆಯಲಿಕ್ಕೆ ಏಕೆ ಹಿಂದೇಟು ಹಾಕುತ್ತೀರಾ ಎಂದು ನಾನು ಪ್ರಶ್ನೆ ಕೇಳಿದೆ, ಎಷ್ಟು ದಿವಸದಲ್ಲಿ ಅವರನ್ನು ತೆಗೆಯುತ್ತೀರಿ. ಅವರ ನಾಮಕರಣವನ್ನು ಎಷ್ಟು ದಿವಸದಲ್ಲಿ ರದ್ದು ಮಾಡುತ್ತೀರಿ, ಅಲ್ಲಿಂದ ಅವರನ್ನು ಹೊರಗೆ ಹಾಕತಕ್ಕಂಥ ಕಾರ್ಯಕ್ರಮ ಯಾವಾಗ ಮಾಡುತ್ತೀರಿ, ಎಂದು ಕೇಳಿದ್ದಕ್ಕೆ ಉತ್ತರ ಕೊಡಲಿಲ್ಲ. ನೀವು ಹೇಳಬಹುದು ಸರ್ಕಾರ ಯಾವುದಕ್ಕೂ ಭಯ ಬೀಳುವುದಿಲ್ಲ ಎಂದು. ಆದರೆ ಕೃಷಿಕ ಸಮಾಜದಲ್ಲಿ ಯಾರು ಅಧ್ಯಕ್ಷರಾಗಿದ್ದಾರೆ ಅವರು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ ಎನ್ನತಕ್ಕಂಥಾದ್ದರ ಬಗ್ಗೆ ಸಂಪೂರ್ಣವಾದ ವರದಿ ತಮ್ಮ ಕಡೆ ಬಂದಿದ್ದರೂ ಕೂಡ ಅವರನ್ನು ಅಲ್ಲಿ ಮುಂದುವರಿಸಿಕೊಂಡು ಹೋಗುವುದು ಯಾವ ಕಾರ್ಯಕ್ರಮ ಇದು.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೆ, ಅವರು ಕಾನೂನು ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಎನ್ನತಕ್ಕಂಥ ವರದಿ ಸರ್ಕಾರಕ್ಕೆ ಬಂದಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಲ್ಲ, ಅವರ ಮೇಲೆ ಮಾಡಿರತಕ್ಕಂಥ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆ. ಆ ಆರೋಪಗಳು ಸರಿಯೇ ಇಲ್ಲವೇ ಎಂದು ವಿಚಾರಣೆ ಮಾಡಿ ವರದಿ ಕೊಡಿ ಎಂದು ರಿಜಿಸ್ಟ್ರಾರ್‌ಗೆ ಹೇಳಿದ್ದೇವೆ. ಆ ವರದಿ ಬಂದ ತಕ್ಷಣ ಅವರ ಮೇಲೆ ಮಾಡಿರತಕ್ಕಂಥ ಎಲ್ಲಾ ಅಕ್ರಮಗಳನ್ನು ಪರಿಶೀಲನೆ ಮಾಡಿ ಸರ್ಕಾರ ಸೂಕ್ತವಾದಂಥ ನಿರ್ಧಾರ ಮಾಡಿ ನಿರ್ದಿಷ್ಟವಾದಂಥ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಮತ್ತೊಮ್ಮೆ ಹೇಳಲಿಕ್ಕೆ ಬಯಸುತ್ತೇನೆ.

೭ ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಬರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಕಾರ್ಮಿಕ ಮತ್ತು ನೌಕರರ ಬೇಡಿಕೆಗಳನ್ನು ಕಡೆಗಣಿಸಿ ಮಂಗಳೂರು ಕಾರ್ಮಿಕ ಆಯುಕ್ತರು ಸಂಧಾನದ ನೋಟೀಸ್ ಕೊಟ್ಟಿದ್ದರೂ ನಿಗಮದ ವ್ಯವಸ್ಥಾಪಕರು ವಿದೇಶ ಪ್ರವಾಸ ಹೋಗಿರುವ ಬಗ್ಗೆ—

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಬರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಕಾರ್ಮಿಕ ಮತ್ತು ನೌಕರರ ಬೇಡಿಕೆಗಳನ್ನು ಕಡೆಗಣಿಸಿ, ಮಂಗಳೂರು ಕಾರ್ಮಿಕ ಆಯುಕ್ತರು ಸಂಧಾನದ ನೋಟೀಸು ಕೊಟ್ಟಿದ್ದರೂ ನಿಗಮದ ವ್ಯವಸ್ಥಾಪಕರು ವಿದೇಶ ಪ್ರವಾಸಕ್ಕೆ ಹೋಗಿರುವ ಬಗ್ಗೆ ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೃಷಿ ಮತ್ತು ಅರಣ್ಯ ಸಚಿವರ ಪರವಾಗಿ ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ೪೪೫೩ ಹೆಕ್ಟೇರು ರಬ್ಬರ್ ತೋಟಗಳನ್ನು ಹೊಂದಿರುತ್ತದೆ. ಈ ರಬ್ಬರ್ ತೋಟ